<u>ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-</u>

ನನ್ನ ಅಜ್ಜ ದೇವಪ್ಪಗೌಡರಿಗೆ ಒಟ್ಟು ನಾಲ್ಕು ಜನ ಮಕ್ಕಳಿದ್ದು ಅದರಲ್ಲಿ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಕ್ಕಳ ಹೆಸರು ನಂಜುಂಡ ಹಾಗೂ ಜಯದೇವ ಎಂದು ಇರುತ್ತದೆ. ಹೆಣ್ಣು ಮಕ್ಕಳ ಹೆಸರು ಗಂಗಾಂಬಿಕೆ ಹಾಗೂ ಲಲಿತ ಎಂದು ಇರುತ್ತದೆ. ಅವರು ದಾವೆಯ ವಾದಿಯರು ಎಂದರೆ ಸರಿ. ನಂಜುಂಡರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರಿಗೆ ಮದುವೆಯಾಗಿರುವುದಿಲ್ಲ ಎಂದರೆ ಸರಿ. ಅವರು ಮೃತಪಟ್ಟು ಈಗ ಸುಮಾರು 30 ವರ್ಷ ಮೇಲ್ಪಟ್ಟು ಆಗಿರುತ್ತದೆ. ದಾವಾ ಆಸ್ತಿ 1 ರಿಂದ 6 ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿದಾರರು 5 ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಸೀರಿಯಲ್ ನಂ.6, ಸರ್ವೆ ನಂ.510/1 ರಲ್ಲಿ 2 ಎಕರೆ 12 ಗುಂಟೆ ದೇವಪ್ಪಗೌಡರು ಖರೀದಿಸಿದ ಆಸ್ತಿ ಆಗಿರುತ್ತದೆ. ಸದರಿ ಆಸ್ತಿಯನ್ನು ದೇವಪ್ಪಗೌಡರು ಯಾವ ವರ್ಷ ಖರೀದಿಸಿರುತ್ತಾರೆ ಎಂದು ಹೇಳಲು ನನಗೆ ಆಗುವುದಿಲ್ಲ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಅಜ್ಜ ದೇವಪ್ಪಗೌಡರು ವ್ಯವಸಾಯ ಮಾತ್ರ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಭತ್ತದ ವ್ಯಾಪಾರ ಹಾಗೂ ಬಾಡಿಗೆಗೆ ಟಿಲ್ಲರ್ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಭತ್ತದ ವ್ಯಾಪಾರವನ್ನು ಮಾಡಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿಯನ್ನು ಪಡೆದಿರುವುದಿಲ್ಲ. ಟಿಲ್ಲರ್ ನನ್ನ ಅಜ್ಜನ

ಹೆಸರಿನಲ್ಲಿಯೇ ಇತ್ತು. ಅದರ ನಂಬರ್ ಅನ್ನು ಹೇಳಲು ನನಗೆ ಆಗುವುದಿಲ್ಲ. ಈಗ ಸದರಿ ಟಿಲ್ಲರ್ ಇರುವುದಿಲ್ಲ. ಅದನ್ನು ಸುಮಾರು 25 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತಾರೆ.

ದಾವಾ ಆಸ್ತಿ ಸೀರಿಯಲ್ ನಂ.7, ಸರ್ವೆ ನಂ.585 ರಲ್ಲಿ 3 ಎಕರೆ 23 ಗುಂಟೆಯನ್ನು ನನ್ನ ಅಜ್ಜ ದೇವಪ್ಪಗೌಡರು ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ಖರೀದಿ ಮಾಡಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿ ಸರ್ವೆ ನಂ.8 ಸರ್ವೆ ನಂ.669/2 ರಲ್ಲಿ 2 ಎಕರೆ 20 ಗುಂಟೆ ನನ್ನ ಅಜ್ಜ ದೇವಪ್ಪಪಗೌಡರಿಗೆ ದರ್ಖಾಸ್ತ್ ನಲ್ಲಿ ಬಂದಿರುತ್ತದೆ. 1975 ರಲ್ಲಿ ದರ್ಖಾಸ್ತ್ ನಲ್ಲಿ ಆದೇಶವಾಗಿರುತ್ತದೆ. ಆ ಸಮಯದಲ್ಲಿ ವಾದಿಯರು ಹಾಗೂ ದೇವಪ್ಪಗೌಡರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ.

1 ನೇ ವಾದಿ ಗಂಗಾಬಿಕೆಗೆ 1973 ರಲ್ಲಿ ಮದುವೆಯಾಗಿರುತ್ತದೆ. 2 ನೇ ವಾದಿ ಲಲಿತಾರವರಿಗೆ 1981 ರಲ್ಲಿ ಮದುವೆಯಾಗಿರುತ್ತದೆ. 1975 ರ ದರ್ಖಾಸ್ತ್ ಆದೇಶಕ್ಕಿಂತ 15 ರಿಂದ 20 ವರ್ಷ ಪೂರ್ವದಿಂದ ನನ್ನ ಅಜ್ಜ ಸದರಿ ಆಸ್ತಿಯ ಸ್ವಾಧೀನದಲ್ಲಿ ಇದ್ದರು. ಆ ಸಮಯದಲ್ಲಿ ವಾದಿಯರು ಕೂಡಾ ನನ್ನ ಅಜ್ಜನ ಜೊತೆಗೆ ಕೆಲಸ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ.7 ಮತ್ತು 8 ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

ನಿಡಿ-2 ದಾನಪತ್ರವನ್ನು ಮಾಡಿದೆ ಎಂದು ಹೇಳಲಾದ ಸಮಯದಲ್ಲಿ ನನ್ನ ಅಜ್ಜ ದೇವಪ್ಪಗೌಡರಿಗೆ 90 ವರ್ಷ ವಯಸ್ಸು ಆಗಿತ್ತು. ನನ್ನ ಅಜ್ಜನಿಗೆ ಕನ್ನಡ

ಓದಲು ಮತ್ತು ಬರೆಯಲು ಬರುತ್ತಿತ್ತು. ನನ್ನ ಅಜ್ಜ 4 ನೇ ತರಗತಿಯವರೆಗೆ ಓದಿದ್ದರು. ನನ್ನ ಅಜ್ಜನಿಗೆ ಆ ಸಮಯದಲ್ಲಿ 90 ವರ್ಷ ವಯಸ್ಸು ಆಗಿದ್ದುದರಿಂದ ಅವರ ಆರೋಗ್ಯ ಸರಿ ಇರಲಿಲ್ಲ ಹಾಗೂ ಜ್ಞಾಪಕ ಶಕ್ತಿ ಕಡಿಮೆ ಇತ್ತು ಎಂದರೆ ಸರಿಯಲ್ಲ. ನನ್ನ ಅಜ್ಜ ಅವರ 96 ನೇ ವಯಸ್ಸಿನಲ್ಲಿ ಮೃತಪಟ್ಟಿರುತ್ತಾರೆ. ಅವರು ನಮ್ಮ ಮನೆಯಲ್ಲಿಯೇ ಮೃತಪಟ್ಟಿರುತ್ತಾರೆ. ದಾನಪತ್ರವನ್ನು ತಯಾರಿಸಲು ನನ್ನ ಅಜ್ಜನೇ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ದಾನಪತ್ರದ ವಿಚಾರವನ್ನು ವಾದಿಯರಿಗೆ ತಿಳಿಸಲಾಗಿತ್ತು. ಸದರಿ ದಾನಪತ್ರವನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ಆ ಸಮಯದಲ್ಲಿ ವಾದಿಯರು ಹಾಜರಿದ್ದರು. ವಾದಿಯರ ಸಹಿಯನ್ನು ಸದರಿ ದಾನಪತ್ರಕ್ಕೆ ಪಡೆದುಕೊಂಡಿರುವುದಿಲ್ಲ. ವಾದಿಯರು ಸಹಿಯನ್ನು ಹಾಕಲು ಒಪ್ಪದೇ ಇದ್ದುದರಿಂದ ಅವರ ಸಹಿಯನ್ನು ದಾನಪತ್ರಕ್ಕೆ ಪಡೆದುಕೊಂಡಿರುವುದಿಲ್ಲ. ನಿಡಿ-2 ಕ್ಕೆ ವೀರಭದ್ರ ಹಾಗೂ ರಮೇಶ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

ನನ್ನ ಅಜ್ಜಿ 1 ನೇ ಪ್ರತಿವಾದಿ ನಮ್ಮ ಜೊತೆಗೆ ವಾಸವಾಗಿದ್ದರು. ಅವರು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅವರಿಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಡಿ-1 ದಾನಪತ್ರವನ್ನು ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಗೆ 80 ವರ್ಷ ಆಗಿರುತ್ತದೆ. ಆ ಸಮಯದಲ್ಲಿ 1 ನೇ ಪ್ರತಿವಾದಿಗೆ ಆರೋಗ್ಯ ಸರಿ ಇರಲಿಲ್ಲ ಹಾಗೂ ಜ್ಞಾಪಕ ಶಕ್ತಿ ಸರಿ ಇರಲಿಲ್ಲ. 1 ನೇ ಪ್ರತಿವಾದಿಯು ಮಾಡಿದರು ಎನ್ನಲಾದ ನಿಡಿ-1 ದಾನಪತ್ರದಲ್ಲಿ ತೋರಿಸಲಾದ ಆಸ್ತಿಯೂ ಕೂಡಾ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಿಡಿ-1 ನ್ನು

ತಯಾರಿಸುವ ಕಾಲಕ್ಕೆ ವಾದಿಯರಿಗೆ ವಿಷಯವನ್ನು ತಿಳಿಸಲಾಗಿತ್ತು. ವಾದಿಯರು ಬರುವುದಿಲ್ಲ ಎಂದು ಹೇಳಿದ್ದರಿಂದ ಸದರಿ ದಾನಪತ್ರಕ್ಕೆ ವಾದಿಯರ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ನಿಡಿ-1 ಕ್ಕೂ ನನ್ನ ಅಜ್ಜ ದೇವಪ್ಪಗೌಡರೇ ಮಾಹಿತಿಯನ್ನು ನೀಡಿರುತ್ತಾರೆ. ಈ ಬಗ್ಗೆ ಸದರಿ ದಾನಪತ್ರದಲ್ಲಿ ಬರೆದಿರುತ್ತಾರೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ನಿಡಿ-1 ನ್ನು ತಯಾರಿಸುವ ಕಾಲಕ್ಕೆ ಮೋಹನ್ ಹಾಗೂ ರಾಜೇಶ್ ಎನ್ನುವವರು ಹಾಜರಿದ್ದರು.

ದಾವಾ ಆಸ್ತಿ ನಂ.1 ರಿಂದ 8 ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ವಾದಿಯರು ದೇವಪ್ಪಗೌಡರ ಜೀವಿತಾವಧಿಯಲ್ಲಿ ಹಾಗೂ ಹಿಂದಿನವರೆಗೂ ಸದರಿ ಆಸ್ತಿಯ ಸ್ವಾಧೀನವನ್ನು ಹೊಂದಿದ್ದರು ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಗಳ ಮೇಲೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಒಂದುವರೆ ಎಕರೆ ಆಸ್ತಿಯು ವಾದಿಯರ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ಹವ್ವಳ್ಳಿ ಗ್ರಾಮದ ಸರ್ವೆ ನಂ.219 ಇರುತ್ತದೆ. ಸದರಿ ಆಸ್ತಿಯು ನನ್ನ ತಂದೆ ಜಯದೇವ್ ಹಾಗೂ 1 ನೇ ಪ್ರತಿವಾದಿ ಹಾಗೂ ವಾದಿಯರ ಹೆಸರಿನಲ್ಲಿ ಇರುತ್ತದೆ.

ದಾವಾ ಆಸ್ತಿ ಐಟಂ ನಂ.1 ರಿಂದ 5 ವಾದಿಯರು ಹಾಗೂ 1 ನೇ ಪ್ರತಿವಾದಿ ಹಾಗೂ ನನ್ನ ತಂದೆಯ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಅಜ್ಜನ ಜೀವಿತಾವಧಿಯಲ್ಲಿ ಆಗಲೀ ಅಥವಾ ನಂತರದಲ್ಲಿ ಆಗಲೀ ದಾವಾ ಆಸ್ತಿಯ ಬಗ್ಗೆ ಯಾವುದೇ ನೊಂದಾಯಿತ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ನನ್ನ ಅಜ್ಜನಿಗೆ ವಯಸ್ಸಾಗಿದ್ದುದರಿಂದ ಅವರಿಗೆ ಗೊತ್ತಾಗದ

ರೀತಿಯಲ್ಲಿ ದಾನಪತ್ರವನ್ನು ನಾವು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿಗೆ ಓದಲು ಮತ್ತು ಬರೆಯಲು ಬಾರದೇ ಇದ್ದುದರಿಂದ ಅದನ್ನು ದುರುಪಯೋಗಪಡಿಸಿಕೊಂಡು ದಾನಪತ್ರವನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಡಿ-1 ಮತ್ತು 2 ರಲ್ಲಿ ನಮೂದಿಸಲಾದ ಆಸ್ತಿಗಳಲ್ಲಿ ವಾದಿಯರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಯರೂ ಕೂಡಾ ನನ್ನ ಅಜ್ಜ ಹಾಗೂ 1 ನೇ ಪ್ರತಿವಾದಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾವು ಸದರಿ ದಾನಪತ್ರಗಳನ್ನು ಮೋಸದಿಂದ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲನ್ನು ಕೊಡಬೇಕಾಗುತ್ತದೆ ಎಂದು ಹೇಳಿ ನಾವು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ನೀಡಿದೆ ಎಂದು ಹೇಳಲಾದ ಒಂದೂವರೆ ಎಕರೆ ಜಮೀನು ಈಗ ಯಾರ ಸ್ವಾಧೀನದಲ್ಲಿಯೂ ಇರುವುದಿಲ್ಲ. ಸದರಿ ಜಮೀನು ತರಿ ಜಮೀನು ಆಗಿರುತ್ತದೆ.

ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ವಕೀಲರಿಂದಃ-

(1 ನೇ ಪ್ರತಿವಾದಿ ಪರ ವಕೀಲರನ್ನು ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

ಎಸ್‌ಆರ್ಃ

ಓ.ಎಸ್.ನಂಃ 126/2022
ಡಿ.ಡಬ್ಲ್ಯೂಃ 1